ಪತ್ರಿಕಾ ತುಣುಕುಗಳು
**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ಗೃಹ - ಸಿ.ಡಿ. ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE :27/3/2021

# ಉದ್ಯೋಗದ ಭರವಸೆ ನೀಡಿ ಲೈಂಗಿಕ ದೌರ್ಜನ್ಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 27-3-21

ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ವಕೀಲರ ಮೂಲಕ ದೂರು ನೀಡಿರುವ ಸಿಡಿ ಪ್ರಕರಣದ ಯುವತಿ, ದೂರಿನಲ್ಲಿ ಎಲ್ಲಿಯೂ ಅತ್ಯಾಚಾರ ಪದ ಉಲ್ಲೇಖ ಮಾಡಿಲ್ಲ. ಸರ್ಕಾರಿ ನೌಕರಿ ಕೊಡಿಸುವ ಆಮಿಷವೊಡ್ಡಿ ಮಾಜಿ ಸಚಿವರು ತಮ್ಮ ಅಪಾರ್ಟ್‌ಮೆಂಟ್‌ಗೆ ಕರೆಸಿ ಲೈಂಗಿಕ ಸಂಪರ್ಕ ಬೆಳೆಸಿದರು. ನಂತರ ನೌಕರಿ ಕೇಳಿದಾಗ ಅಶ್ಲೀಲವಾಗಿ ನಿಂದಿಸಿ ವಂಚಿಸಿರುವುದಾಗಿ ಉಲ್ಲೇಖಿಸಿದ್ದಾಳೆ.

'ಬೆಂಗಳೂರಿಗೆ ನೌಕರಿ ಹುಡುಕಿಕೊಂಡು ಬಂದಿದ್ದೆ. ಕಿರುಚಿತ್ರ ತೆಗೆಯುವ ಸಲುವಾಗಿ ಸಚಿವರಾಗಿದ್ದ ರಮೇಶ್ ಜಾರಕಿಹೊಳಿ ಭೇಟಿ ಮಾಡಿದ್ದೆ. ಆಗ ಮೊಬೈಲ್ ನಂಬರ್ ಪಡೆದ ಸಚಿವರು, ಒಮ್ಮೆ ಕರೆ ಮಾಡಿ ನನ್ನ ಹಾಗೂ ಕುಟುಂಬದ ಬಗ್ಗೆ ವಿಚಾರಿಸಿ ಸಲುಗೆಯಿಂದ ಮಾತು ಶುರು ಮಾಡಿದರು. ಸಚಿವರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡಿಸಿದ್ದು, ತುಂಬಾ ಖುಷಿ ಆಗಿ ಗೌರವದಿಂದ ಮಾತನಾಡಿಸಿದೆ. ಪ್ರಭಾವ ಬಳಸಿ ಸರ್ಕಾರಿ ನೌಕರಿ ಕೊಡಿಸುವುದಾಗಿ ರಮೇಶ್ ಹೇಳಿದ್ದರು. ಆದರೆ, ನೌಕರಿ ಕೊಡಿಸುವ ಬದಲಾಗಿ ನೀನು ನನ್ನ ಜತೆ ಎಲ್ಲ ರೀತಿಯ ಸಹಕಾರ ನೀಡಬೇಕು ಎಂದು ಕೇಳಿದರು. ನೌಕರಿಗಾಗಿ ನನ್ನ ಬಳಿ ಕೊಡಲು ಲಕ್ಷಾಂತರ ಹಣ ಇರಲಿಲ್ಲ. ಹೀಗಾಗಿ ಅವರು ಕೇಳಿದಂತೆ ನಡೆದುಕೊಂಡೆ. ದೆಹಲಿಯಲ್ಲಿ ಉಳಿದುಕೊಂಡಿದ್ದೇನೆಂದು ವಿಡಿಯೋ ಕರೆ ಮಾಡಿ ಲೈಂಗಿಕ ವಿಚಾರಗಳನ್ನು ಮಾತನಾಡಿದರು. ಬಟ್ಟೆ ತೆಗೆದು ನಗ್ನಳಾಗಿ ಮಾಡಿಸಿದರು.

> » ಅತ್ಯಾಚಾರ ಪದ ಬಳಸದ ಯುವತಿ
>
> ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಆದೇಶಗಳು ಹಾಗೂ ನಿರ್ಭಯಾ ಮಾರ್ಗಸೂಚಿ ಪಾಲಿಸಬೇಕು. ಯುವತಿ ದೂರು ಆಧರಿಸಿ ಮಾಜಿ ಸಚಿವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ನಿಷ್ಪಕ್ಷಪಾತ, ಪ್ರಾಮಾಣಿಕ ತನಿಖೆ ನಡೆಯಬೇಕು. ಯುವತಿ ಮತ್ತು ಆಕೆ ಕುಟುಂಬಸ್ಥರಿಗೆ ರಕ್ಷಣೆ ನೀಡಬೇಕು.
>
> | ಜಗದೀಶ್ ವಕೀಲ

ಪ್ರಭಾವಿ ವ್ಯಕ್ತಿ ಆದಕಾರಣ ಅವರು ಹೇಳಿದಂತೆಲ್ಲ ಮಾಡಿದೆ. ನಂತರ ಬೆಂಗಳೂರಿಗೆ ಬಂದಮೇಲೆ ನನ್ನ ನಿವಾಸಕ್ಕೆ ಬಾ ಮಾತನಾಡಬೇಕು ಎಂದರು. ಅವರು ಹೇಳಿದ ಅಪಾರ್ಟ್‌ಮೆಂಟ್‌ಗೆ ಹೋದೆ. ಅಶ್ಲೀಲವಾಗಿ ಮಾತನಾಡಿ, ರೂಂಗೆ ಕರೆದುಕೊಂಡು ಹೋಗಿ ಲೈಂಗಿಕ ಕ್ರಿಯೆ ನಡೆಸಿದರು. ಇದೇ ರೀತಿ ಎರಡು ಬಾರಿ ಅವರ ಅಪಾರ್ಟ್‌ಮೆಂಟ್‌ಗೆ ಕರೆಸಿ ಲೈಂಗಿಕ ಕ್ರಿಯೆ ನಡೆಸಿ, ಅಶ್ಲೀಲವಾಗಿ ಮಾತನಾಡಿದರು. ನನ್ನ ಹೇಗೆ ಬೇಕೋ ಹಾಗೆ ಬಳಸಿಕೊಂಡು, ಈಗ ಯಾಕೆ ಕೆಲಸ ಕೊಡಿಸುತ್ತಿಲ್ಲ ಎಂದು ಕೇಳಿದಾಗ ಅಶ್ಲೀಲ ಪದಗಳಿಂದ ನಿಂದಿಸಿದರು. ನಿನಗೆ ಸರ್ಕಾರಿ ಕೆಲಸ ಕೊಡಕ್ಕೆ ಆಗುತ್ತಾ ಎಂದು ಬೈದು ಕಳುಹಿಸಿದರು ಎಂದು ದೂರಿನಲ್ಲಿ ವಿವರಿಸಿದ್ದಾಳೆ.

ಆಬಳಿಕ ನನ್ನೊಂದಿಗೆ ಮಾತನಾಡಿದ, ಅಶ್ಲೀಲ ವಿಡಿಯೋ ಮಾಧ್ಯಮಗಳಲ್ಲಿ ಪ್ರಸಾರವಾಗಿವೆ. ನಾನು ಅವರ ವಿರುದ್ಧ ಹೇಳಿಕೆ ನೀಡದಂತೆ ಕುತಂತ್ರ ನಡೆಸಿದರು. ಪ್ರಭಾವಿಗಳಾದ ಮಾಜಿ ಸಚಿವರಿಂದ ನನಗೂ, ನನ್ನ ಕುಟುಂಬ ಸದಸ್ಯರಿಗೂ ಜೀವ ಬೆದರಿಕೆ ಇದೆ. ದೂರು ನೀಡದಂತೆ ತಡೆಯಲು ಮತ್ತು ಅವರ ಕೈಗೆ ಸಿಕ್ಕರೆ ಕೊಂದು ಬಿಡಲು ಪ್ರಯತ್ನ ಮಾಡುತ್ತಿದ್ದಾರೆ. ನನಗೆ ಮತ್ತು ನನ್ನ ಕುಟುಂಬಕ್ಕೆ ಭದ್ರತೆ ನೀಡಿ. ಲೈಂಗಿಕವಾಗಿ ಬಳಸಿಕೊಂಡು ಮೋಸ ಮಾಡಿ, ಕೊಲೆ ಮಾಡಿಸಲು ಯತ್ನಿಸಿರುವ ರಮೇಶ್ ಜಾರಕಿಹೊಳಿ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕು. ನೇರವಾಗಿ ಠಾಣೆಗೂ ಬಂದು ದೂರು ನೀಡದಂತೆ ಪೊಲೀಸ್ ಇಲಾಖೆಯನ್ನು ಅವರು ಬಳಸಿಕೊಳ್ಳುತ್ತಿದ್ದಾರೆ. ನನ್ನ ಪರವಾಗಿ ಯಾರೂ ಮಾತನಾಡದಂತೆ ಹಾಗೂ ತೇಜೋವಧೆ, ಟಾರ್ಗೆಟ್ ಮಾಡಿ ಅವರ ಕುಟುಂಬಸ್ಥರಿಗೆ ಹಿಂಸೆ ಕೊಡುತ್ತಿರುವುದು ನೋವಾಗಿದೆ. ನನಗೆ ಭದ್ರತೆ ಇಲ್ಲದ ಕಾರಣ ಕೈಯಲ್ಲಿ ಬರೆದ ದೂರನ್ನು ಪರಿಚಿತ ವಕೀಲ ಜಗದೀಶ್ ಮೂಲಕ ಕಳುಹಿಸುತ್ತಿದ್ದೇನೆ. ಮಾನಸಿಕ ಹಿಂಸೆ ಮತ್ತು ಕುಟುಂಬ ಸದಸ್ಯರಿಗೆ ಒತ್ತಡವೇರಿ ಅವರು ಆತ್ಮಹತ್ಯೆಗೆ ಯತ್ನಿಸುವಂತೆ ಮಾಡಿದ್ದಾರೆ. ನನಗೆ ರಮೇಶ್ ಜಾರಕಿಹೊಳಿ ಮತ್ತು ಅವರ ಕಡೆಯವರಿಂದ ಅಪಾಯವಾಗದಂತೆ ರಕ್ಷಣೆ ನೀಡಬೇಕೆಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾಳೆ.

## ಭದ್ರತೆ ಕೋರಿ ಡಿಜಿಪಿಗೆ ಮನವಿ

ಯುವತಿ ಮತ್ತು ಆಕೆ ಕುಟುಂಬಸ್ಥರಿಗೆ ಭದ್ರತೆ ನೀಡಬೇಕೆಂದು ಆಕೆ ಪರ ವಕೀಲ ಜಗದೀಶ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್‌ಗೆ ಮನವಿ ಮಾಡಿದ್ದಾರೆ. ಭದ್ರತೆ ಭರವಸೆ ನೀಡಿದರೆ ಎಸ್‌ಐಟಿ ಮುಂದೆ ಯುವತಿ ಬರುವುದಾಗಿ ತಿಳಿಸಿದ್ದಾರೆ. ಅದಕ್ಕೆ ಸೂದ್ ಸ್ಪಂದಿಸಿದ್ದಾರೆ.